6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ

ಸಿ ಸಿ ಸಂಖ್ಯೆಃ 14462/2015

ಪಿರ್ಯಾದುದಾರರು ರಾಜ್ಯ ಪರಃ ಮೈಕೋಲೇಔಟ್ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು ಃ ಎ1) ಎಸ್ ಪ್ರಸನ್ನ
ಎ2) ಎಸ್.ನರೇಂದ್ರ

ಃದೋಷಾರೋಪಣೆಃ

ನಾನು ಶ್ರೀ. ಜಗದೀಶ್.ವಿ. ಬಿ.ಎಸ್.ಸಿ., ಎಲ್.ಎಲ್.ಎಂ, 6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಆದ ನಾನು ಈ ಕೆಳಕಂಡಂತೆ ನಿಮ್ಮ ಮೇಲೆ ಈ ದೋಷಾರೋಪಣೆ ಹೊರಿಸುತ್ತೇನೆ. ಏನೆಂದರೆಃ

ದಿನಾಂಕಃ 01.08.2011 ರಂದು ಸಾಕ್ಷಿ-1 ಮತ್ತು ಇತರೆ ರಕ್ತ ಸಂಬಂದಿಗಳಿಗೆ ಸೇರಿದ ಎನ್.ಎಸ್ ಪಾಳ್ಯದ ಸರ್ವೇ ನಂಬರ್ 128 ರ ಸ್ವತ್ತಿನ ಬಳಿ ಆರೋಪಿಗಳಾದ ನೀವುಗಳು ಬಂದು ಅಲ್ಲಿದ್ದ ಬಾಡಿಗೆದಾರರಿಗೆ ಈ ಸ್ವತ್ತು ನಮ್ಮದು, ನೀವೆಲ್ಲಾ ಬಾಡಿಗೆ ಹಣವನ್ನು ನಮಗೇ ಕೊಡಬೇಕು, ಈ ಸ್ವತನ್ನು ನಮ್ಮ ತಾತನವರು ನಮಗೆ ದಾನಪತ್ರದ ಮೂಲಕ ಕೊಟ್ಟಿದ್ದಾರೆ, ನಾವು ಖಾಲಿ ಮಾಡಿ ಎಂದಾಗ ನೀವು ಖಾಲಿ ಮಾಡಬೇಕೆಂದು ಹೆದರಿಸಿರುತ್ತೀರಿ ಮತ್ತು ಎ1 ಮತ್ತು ಎ2 ಆರೋಪಿತರಾದ ನೀವು ಎನ್ಎಸ್ ಪಾಳ್ಯ ಸರ್ವೇ ನಂಬರ್ 128 ರಲ್ಲಿನ ಸ್ವತ್ನನ್ನು ಕಬಳಿಸುಜಾತವ ಸಮಾನ ಉದ್ದೇಶದಿಂದ ಅಪರಾಧಿಕ ಒಳ ಸಂಚು ನಡೆಸಿ, ಸಾಕ್ಷಿ-1 ರವರ ತಂದೆ ಸತ್ತ ನಚಿತರದಲ್ಲಿ ತಾವುಗಳು ರಾಮಯ್ಯ ಅಲಿಯಾಸ್ ದೊಡ್ಡಣ್ಣಯ್ಯನವರ ಮಗನಾದ ಶ್ರೀನಿವಾಸ್ ಎಂಬುವರ ಮಕ್ಕಳೆಂದು ಸಂಬಂದ ನಮೂದಿಸಿ, ನಕಲಿ ದಾನಪತ್ರ ಸೃಷ್ಟಿಸಿಕೊಂಡು ನೋಂದಣಿ ಮಾಡಿಸಿ, ಸಾಕ್ಷಿ-1 ಹಾಗೂ ಇತರರಿಗೆ ಮೋಸ ಮಾಡಲು ಪ್ರಯತ್ನಿಸಿರುವ ಕಾರಣ ನೀವು ಭಾದಂಸ ಕಲಂ 120(ಬಿ), 419, 468,

471, 420, 506 ರೆ ವಿ 34 ಅಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂಬ ಆರೋಪ ನಿಮ್ಮ ಮೇಲೆ ಇದೆ. ಅದು ನನ್ನ ಸಂಜ್ಞಾನದಲ್ಲಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

6ನೇ ಅ ಮು ಮ ದಂ
ಬೆಂಗಳೂರು

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತು?

ಉತ್ತರಃ ಎ1)

ಎ2)

2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?

ಉತ್ತರಃ ಎ1)

ಎ2)

(ಮೇಲ್ಕಾಣಿಸಿದ ಆರೋಪಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಕನ್ನಡದಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)

ದಿನಾಂಕಃ

6ನೇ ಅ ಮು ಮ ದಂ
ಬೆಂಗಳೂರು